ಇ) ಕೆಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿಮಾಡಲು ಸಾಧ್ಯವಿದ್ದಲ್ಲಿ ರಿಪೇರಿಮಾಡ ಲಾಗುವುದು. 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 692 ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ರೂ. 104.5 ಲಕ್ಷಗಳ ವೆಚ್ಚದಲ್ಲಿ ರಿಪೇರಿ ಮಾಡಲಾಗಿದೆ. 25 ಕೆ.ವಿ.ಎ. ಸಾಮರ್ಥ್ಯದ ಹಾಗೂ 25 ಕೆ.ವಿ.ಎ ಕ್ಕಿಂತ ಹೆಚ್ಚಿನ ಸಾಮರ್ಥ್ಯದರಿಪೇರಿ ಮಾಡಲು ಬರದಂತಹ ಟ್ರಾನ್ಸ್‌ಫಾರ್ಮರ್‌ಗಳನ್ನು ವಿಲೇವಾರಿ ಮಾಡಲಾಗುವುದು. 1998-99ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವಿಭಾಗದಿಂದ ಒಟ್ಟು 25 ಕೆ.ವಿ.ಎ ಸಾಮರ್ಥ್ಯದ 1300 ಸಂಖ್ಯೆ ಟ್ರಾನ್ಸ್‌ಫಾರ್ಮರ್‌ಗಳನ್ನು ವಿಲೇವಾರಿ ಮಾಡಲಾಗಿದೆ. ಅವುಗಳಿಂದ ಬಂದ ಆದಾಯ ರೂ. 37.52 ಲಕ್ಷ ರೂ. ಗಳು.

ಈ) ಹೌದು. ಕೆಲವೊಮ್ಮೆ ನಿವಾರ್ಯ ಕಾರಣಗಳಿಂದ ವಿಫಲಗೊಂಡ ಪರಿವರ್ತಕಗಳು ಆ ಸ್ಥಳಗಳಲ್ಲಿಯೇ ಉಳಿದಿರುವ ಆ ಬಗ್ಗೆ ಮಂಡಳಿಯ ಗಮನಕ್ಕೆ ಬಂದ ತಕ್ಷಣ ಸಂಬಂಧಿಸಿದ ಉಗ್ರಾಣಗಳಿಗೆ ಸಾಗಿಸಲು ಸೂಕ್ತವ್ಯವಸ್ಥೆ ಮಾಡಲಾಗಿದೆ. ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಕೂಡಲೇ ಉಪವಿಭಾಗೀಯ ಅಥವಾ ವಿಭಾಗೀಯ ಉಗ್ರಾಣಗಳಿಗೆ ಕಳುಹಿಸಲೂ ಸಹ ಸಂಬಂಧಪಟ್ಟ ಸಿಬ್ಬಂದಿಗೆ ಸೂಕ್ತ ಆದೇಶ ನೀಡಲಾಗಿದೆ. ವಿಫಲವಾದ ಪರಿವರ್ತಕಗಳನ್ನು ಉಗ್ರಾಣಗಳಿಗೆ ಕಳುಹಿಸಲಾಗಿದೆ.

ವಿದ್ಯುಚ್ಛಕ್ತಿ ಮಂಡಳಿಯಿಂದ ಸೆಲ್ಫ್ ಫೈನಾನ್ಸ್ ಯೋಜನೆ ಜಾರಿ

333 (715) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸಂಪರ್ಕ ಪಡೆಯುವವರೇ ಸೆಲ್ಫ್ ಫೈನಾನ್ಸ್ ಯೋಜನೆ ಅಳವಡಿಸುವ ಉದ್ದೇಶ ಸರ್ಕಾರಕ್ಕಿದೆಯೇ? ಈ ನಿಟ್ಟಿನಲ್ಲಿ ಇಲಾಖೆ ಕೈಗೊಂಡ ಕ್ರಮಗಳೇನು?

ಆ) ವಿದ್ಯುತ್ ಇಲಾಖೆಯಲ್ಲಿ ಫಲಾನುಭವಿಗಳಿಗೆ ಸಾಮಗ್ರಿಗಳ ಕೊರತೆಯಿಂದ ಕಲ್ಪಿಸಂಪರ್ಕಸುವಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಪ್ರಸ್ತುತ ನೀರಾವರಿ ಸಂಪ್ ಸೆಟ್‌ಗಳಿಗೆವಿದ್ಯುತ್ ಸಂಪರ್ಕ ಪಡೆಯಲು ಮಾತ್ರ 'ಸೆಲ್ಫ್ ಫೈನಾನ್ಸ್' ಯೋಜನೆ ಯು.ಕೆ.ವಿ ಮಂಡಳಿಯಲ್ಲಿ ಜಾರಿಯಲ್ಲಿದೆ. ಈಯೋಜನೆಯಾನುಸಾರ ತಮ್ಮ ನೀರಾವರಿ ಪಂಪ್‌ಸೆಟ್‌ಗಳಿಗೆ ಆದ್ಯತೆಯ ಹೊರತಾಗಿ ವಿದ್ಯುತ್ ಸಂಪರ್ಕ ಪಡೆಯಲ್ಲಿಚ್ಛಿಸುವ ಅರ್ಜಿದಾರರು ಮಂಡಳಿಗೆ ನಿಗಧಿತ ಮೊತ್ತವನ್ನು ಪಾವತಿ ಮಾಡಿ ಮಂಡಳಿಯ ಇತರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಆದರೆ ಈ ಯೋಜನೆಯು ಐಚ್ಛಿಕವಾಗಿರುತ್ತದೆ.

ಆ) ಹೌದು. ಸಾರ್ವಜನಿಕ ಹಿತಾಸಕ್ತಿಯನ್ನು ಪರಿಗಣಿಸಿ ಸಾರ್ವಜನಿಕ ಕುಡಿಯುವ ನೀರಿನ ಯೋಜನೆಗಳ ವಿದ್ಯುದ್ದೀಕರಣಕ್ಕೆ ಸಾಮಗ್ರಿಗಳನ್ನು ಆದ್ಯತೆಯ ಮೇಲೆ ಒದಗಿಸಲಾಗುತ್ತದೆ. ಆದರೂ ಸಹ ಸೆಲ್ಫ್ ಫೈನಾನ್ಸ್ ಯೋಜನೆಯ ಫಲಾನುಭವಿಗಳಿಗೆ ತೊಂದರೆಯಾಗದಂತೆ ಅವರ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣಕ್ಕೆ ಸಾಮಗ್ರಿಗಳನ್ನು ಒದಗಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ವಿದ್ಯುತ್ ಸಂಪರ್ಕ ಕಲ್ಪಿಸಲು ಅವಶ್ಯಕವಾದ ಸಾಮಗ್ರಿಗಳನ್ನು ಖರೀದಿಸಲು ಮಂಡಳಿಯು ಕ್ರಮ ಕೈಗೊಳ್ಳುತಿದೆ. ಅಲ್ಲದೆ ಕೆಲವು ಅತ್ಯವಶ್ಯಕ ಸಾಮಗ್ರಿಗಳನ್ನು ಅವರವರ ಅಧಿಕಾರ ವ್ಯಾಪ್ತಿಯಲ್ಲಿ ಲಭ್ಯವಿರುವ ಖರೀದಿ ಅನುದಾನವನ್ನು ಲಕ್ಷಿಸಿ ಸಾಮಗ್ರಿಗಳನ್ನು ಖರೀದಿ ಮಾಡಲು ಸಹ ವಲಯ, ವೃತ್ತಮಟ್ಟದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಿರುತ್ತದೆ.

ರಾಜ್ಯದಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಕ್ರಮೀಕರಣ

334 (716) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುತ್ ಮಂಡಳಿಯ ಅಕ್ರಮ ಜೋಡಣೆಯನ್ನು ಸಕ್ರಮಗೊಳಿಸಲು ರೂಪಿಸಿದ ನಿಯಮಗಳೇನು;

ಆ) ಈ ರೀತಿ ಅಕ್ರಮ ವಿದ್ಯುತ್ ಜೋಡಣೆಯಿಂದ ಟ್ರಾನ್ಸ್‌ಫಾರ್ಮರ್‌ಗಳ ಮೇಲೆ ಹೊರೆಯಾಗಿ ಬಳಕೆದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರವು ಕೈ ಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿರುವ ಅನಧಿಕೃತ ನೀರಾವರಿಪಂಪು ಸೆಟ್ಟುಗಳ ಸಕ್ರಮೀಕರಣಕ್ಕೆ ರೂಪಿಸಿದ ನಿಯಮಗಳು ಕೆಳಕಂಡಂತಿದೆ.

1. ಅನಧಿಕೃತ ನೀರಾವರಿ ಪಂಪುಸೆಟ್ ಬಳಕೆದಾರರ ಮಂಡಳಿಯ ಮಾದರಿಯಲ್ಲಿ ವಿದ್ಯುತ್ ಮಾರ್ಗರಚಿಸಿ ಕೊಂಡಿದ್ದರೆ, ಸಾಮಾನ್ಯ ವರ್ಗದವರಿಂದ ರೂ.2500-00 ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಂದ ರೂ. 1250-00ಗಳನ್ನು ಪಾವತಿಸಿಕೊಂಡು ಇತರೆ ಮಂಡಳಿಯ ನಿಯಮಗಳನ್ನು ಅವರು ಪಾಲಿಸಿದ ನಂತರ ದಿನಾಂಕ : 28-2-98ರ ವರೆಗೆ ಸಕ್ರಮಗೊಳಿಸಲಾಗುತ್ತಿತ್ತು.

2. ಒಂದು ವೇಳೆ ಮಂಡಳಿಯ ಮಾದರಿಯಲ್ಲಿ ವಿದ್ಯುತ್‌ಮಾರ್ಗ ರಚಿಸಿಕೊಂಡಿಲ್ಲದಿದ್ದರೆ, ಸಾಮಾನ್ಯ ವರ್ಗದವರಿಂದ ರೂ. 10,000-00 ಹಾಗೂ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗದವರಿಂದ 5000-00 ಅಥವಾ ಎಲ್. ಟಿ.ಮಾರ್ಗ ವಿಸ್ತರಣೆಗೆ ತಗಲುವ ಅಂದಾಜು ಪಟ್ಟಿಇವೆರಡರಲ್ಲಿ ಯಾವುದು ಹೆಚ್ಚು ಅದನ್ನು ಮಂಡಳಿಗೆ ಪಾವತಿಕೊಂಡು ಇತರೆ ನಿಯಮಗಳನ್ನು ಪಾಲಿಸಿದ ನಂತರ ಸಕ್ರಮಗೊಳಿಸಲಾಗುತ್ತಿತ್ತು.